# <u>2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು</u>

# <u>ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ</u>

**MISC.10/2019** **PW: 1**

**ದಿಃ 18.08.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಎದುರುದಾರ ಪರ ಶ್ರೀ ಕೆ ವಿ ಬಿ ವಕೀಲರಿಂದಃ**

1. 1996 ರಲ್ಲಿ ಭಾಗಾಂಶ ಕೋರಿ ಅಸಲು ದಾವೆಯನ್ನು ಹಾಕಿದ್ದೆವು ಎಂದರೆ ಸರಿ. ಅದರ ಸಂಖ್ಯೆ ಒ ಎಸ್ ನಂಃ 13/1996 ಎಂದರೆ ಸರಿ. ಅದು ದಿನಾಂಕ ಃ 21.07.1997 ರಲ್ಲಿ ಡಿಕ್ರಿ ಆಯಿತು ಎಂದರೆ ಸರಿ. ಸದರಿ ದಾವೆಯಲ್ಲಿ ಪ್ರತಿವಾದಿಯು ಹಾಜರಾಗದ ಕಾರಣ ಏಕತರ್ಫಿ ತೀರ್ಪನ್ನು ನ್ಯಾಯಾಲಯದಿಂದ ಪಡೆದಿರುತ್ತೀರಿ ಎಂದರೆ ಸರಿ. ನಂತರ ಎಫ್ ಡಿ ಪಿ ನಂಃ 9/1998 ನ್ನು ದಾಖಲಿಸಿದ್ದೆ ಎಂದರೆ ಸರಿ. ಅದನ್ನು 1/8 ನೇ ಹಿಸ್ಸೇ ಆಸ್ತಿ ಸಂಬಂದ ದಾಖಲಿಸಿದ್ದೆ. ಅದನ್ನು ಎಲ್ಲಾ ಆಸ್ತಿಗಳ ಮೇಲೆ ಹಾಕಿದ್ದೆ. ಅದರಲ್ಲಿ ನನಗೆ ಕಬಜಾ ಸಿಕ್ಕಿದ ಕಾರಣ ಸದರಿ ಪ್ರಕರಣವು ಮುಕ್ತಾಯಗೊಂಡಿರುತ್ತದೆ. ಅದರಲ್ಲಿ ನ್ಯಾಯಾಲಯದಿಂದ ನಿಯೋಗಿಯನ್ನು ನೇಮಿಸುವಂತೆ ಕೋರಿ ಯಾವದೇ ಅರ್ಜಿಯನ್ನು ಹಾಕಿರಲಿಲ್ಲ. ಎಫ್ ಡಿ ಪಿ ನಂ 9/1998 ರಲ್ಲಿ ಮೀನ್ಸ ಪ್ರಾಪಿಟ ಮತ್ತು ಆಸ್ತಿ ಬೇಕೆಂದು ನ್ಯಾಯಾಲಯದ ನಿಯೋಗಿಯನ್ನು ನಿಯೋಜಿಸಲು ಅರ್ಜಿಯನ್ನು ಕೊಟ್ಟಿದ್ದೆವು. ಸದರಿ ಅರ್ಜಿಯ ಮೇಲೆ ಆದೇಶವಾಗಿರುತ್ತದೆ. ಅದರ ಪ್ರಕಾರ ನನ್ನ ಹೆಸರನ್ನು ಆಸ್ತಿಗಳ ಉತಾರದಲ್ಲಿ ಸೇರಿಸಿರುತ್ತೇನೆ. 2008 ರಲ್ಲಿ ಎಫ್ ಡಿ ಪಿ 9/1998 ಮುಕ್ತಾಯವಾಗಿರುತ್ತದೆ.

2. ಎಫ್ ಡಿ ಪಿ 20/2006 ನ್ನು ಮೀನ್ಸ ಪ್ರಾಪಿಟಗಾಗಿ ಹಾಕಿರುತ್ತೇನೆ. ಈ ಕೇಸನಲ್ಲೂ ಸಹ ನ್ಯಾಯಾಲಯದ ನಿಯೋಗಿಯನ್ನು ನೇಮಿಸಲು ಅರ್ಜಿಯನ್ನು ಹಾಕಿದ್ದೆ. ಸದರಿ ಅರ್ಜಿಯು ನ್ಯಾಯಾಲಯದ ನಿಯೋಗಿಯ ವರದಿ ಆದಾರದ ಮೇಲೆ ಮುಕ್ತಾಯಗೊಂಡಿರುತ್ತದೆಂದರೆ ಸರಿ. ಸಾಕ್ಷಿ ಮುಂದುವರೆದು 1996 ರಿಂದ 2001 ರವರೆಗೂ ಮೀನ್ಸ ಪ್ರಾಪಿಟ ಬರಬೇಕೆಂದು ನುಡಿಯುತ್ತಾರೆ. ಎಫ್ ಡಿ ಪಿ 9/1998 ರ ಆದೇಶದ ಮೇಲೆ ಅಮಲುಜಾರಿ ಪ್ರಕರಣವನ್ನು ಹಾಕಿದ್ದೆನು. ಸದರಿ ಅಮಲು ಜಾರಿ ಪ್ರಕರಣ ನಂಬರ ಃ

156/2001 ಎಂದರೆ ಸಾಕ್ಷಿಯು ನೆನಪಿಲ್ಲ ಎನ್ನುತ್ತಾರೆ. ಸಾಕ್ಷಿಗೆ ಸದರಿ ಅಮಲುಜಾರಿ ಪ್ರಕರಣದ ಅಸಲರ್ಜಿ ಹಾಗೂ ಪ್ರಮಾಣ ಪತ್ರವನ್ನು ತೋರಿಸಿ ಕೇಳಲಾಗಿ ಹೌದು ಎಂದು ನುಡಿದಿರುವ ಕಾರಣ ಹಾಗೂ ಸದರಿ ದಾಖಲೆಯು ದೃಡೀಕೃತ ಪ್ರತಿಯಾಗಿರುವ ಕಾರಣ ಅದನ್ನು ನಿಆರ್ 1 ಎಂದು ಗುರುತಿಸಲಾಯಿತು. ಸದರಿ ಅರ್ಜಿಂಹುಲ್ಲಿ ದಿನಾಂಕ : 24.08.2001 ರಂದು ತಮಗೆ ಬರಬೇಕಾದ ಮೀನ್ಸ ಪ್ರಾಪಿಟ ಹಾಗೂ ಜಾಗಾ ನೀಡಲಾಗಿದೆ ಎಂದು ಹೇಳಿ ಮುಕ್ತಾಯಗೊಂಡಿರುತ್ತದೆಂದರೆ ಸಾಕ್ಷಿಯು ಕೇವಲ ಜಾಗಾ ಬಂದಿರುತ್ತದೆಂದು ನುಡಿಯುತ್ತಾರೆ. ಜಾಗಾವನ್ನು ತೆಗೆದುಕೊಂಡ ನಂತರ ಪುನಃ ಎಪ್ ಡಿ ಪಿ ನಂಃ 20/2006 ನ್ನು ಹಾಕಿದ್ದೆ ಎಂದರೆ ಸರಿ. ಇದನ್ನು ಬಾಡಿಗೆ ಮತ್ತು ಮೀನ್ಸ ಪ್ರಾಪಿಟಗಾಗಿ ಸಲ್ಲಿಸಿದ್ದೆ. ಅದರಲ್ಲಿ ಎದುರುದಾರರು  ತಕರಾರನ್ನು ಹಾಕಿದ್ದರೌ ಎಂದರೆ ಸಾಕ್ಷಿಯು 2008 ರಲ್ಲಿ ನ್ಯಾಯಾಲಯವು ಆದೇಶ ಮಾಡಿರುತ್ತದೆಂದು ನುಡಿಯುತ್ತಾರೆ. ರೋಣದ ತಹಶೀಲದಾರ ರವರಿಗೆ ವರದಿ ಸಲ್ಲಿಸುವಂತೆ ಕಳಿಸಿದ್ದರೆಂದರೆ ಸರಿ. ಪುನಃ ಅಮಲುಜಾರಿ ಪ್ರಕರಣ ನಂಃ 39/2009 ನ್ನು ಹಾಕಿದ್ದೆ ಎಂದರೆ ಸಾಕ್ಷಿಯು ಅದರ ನಂಬರ ಗೊತ್ತಿಲ್ಲ ಆದರೆ 2009 ರಲ್ಲಿ ಹಾಕಿದ್ದೆ ಎನ್ನುತ್ತಾರೆ. ಅದನ್ನು ಜಾರಿಗೊಳಿಸಲು ಆಗದ ಡಿಕ್ರೀ ಎಂದು ಹೇಳಿ ಮುಕ್ತಾಯಗೊಂಡಿರುತ್ತದೆಂದರೆ ಸರಿ. ಎಪ್ ಡಿ ಪಿ 20/2006 ರಲ್ಲಿ ಯಾವದೇ ರೀತಿಯ ಆದೇಶ ಆಗಿಲ್ಲ ಎಂದರೆ ಸಾಕ್ಷಿಯು ಆದೇಶವಾಗಿದೆ ಆದರೆ ಮೀನ್ಸ ಪ್ರಾಪಿಟ ಕೊಟ್ಟಿಲ್ಲ ಎನ್ನುತ್ತಾರೆ. ಸದರಿ ಎಪ್ ಡಿ ಪಿ ನಲ್ಲಿ ಮೀನ್ಸ ಪ್ರಾಪಿಟ ನೀಡುವಂತೆ ಆದೇಶ ಮಾಡಿರುತ್ತಾರೆ. ಸದರಿ ಎಪ್ ಡಿ ಪಿ 20/2006 ರಲ್ಲಿ ನ್ಯಾಯಾಲಯದ ನಿಯೋಗಿಯನ್ನು ನೇಮಿಸಲು ಅರ್ಜಿಯನ್ನು ನೀಡಿದ್ದೆ.

3. ಅಸಲು ದಾವಾ ಸಂಖ್ಯೆ : 13/1996 ರಲ್ಲಿ ಆದೇಶವಾದ ನಂತರ ತಾವು ತಮ್ಮ ಹೆಸರನ್ನು ಮಾಲೀಕರ ಕಾಲಂನಲ್ಲಿ ಸೇರಿಸಿರುತ್ತೀರಿ ಎಂದರೆ ಸರಿ.  ಸಾಕ್ಷಿ ಮುಂದುವರೆದು 1997 ರಲ್ಲಿ ಸೇರಿಸಿರುತ್ತೇನೆಂದು ನುಡಿಯುತ್ತಾರೆ. 1997 ರಲ್ಲಿಯೇ ತಾವು ಜಾಗಾದ ಸ್ವಾದೀನವನ್ನು ಪಡೆದಿರುತ್ತೀರಿ ಎಂದರೆ ಸರಿ. 2017 ರಲ್ಲಿ ಸರ್ವೆ ನಂಃ 29 ರಲ್ಲಿ ಕೆಲವೊಂದು ಭಾಗವನ್ನು ನೋಂದಾಯಿತ ಖರೀದಿ ಪತ್ರದ ಮುಖಾಂತರ ಮಾರಾಟ ಮಾಡಿರುತ್ತೀರಿ ಎಂದರೆ ಸರಿ. ಆರ್ ಎಸ್ ನಂಃ 4624 ರ ಕೆಳಗಡೆ ಗುಡೌನ ಇದ್ದು ಮೇಲೆ ಮನೆ ಇರುತ್ತದೆಂದರೆ ಸಾಕ್ಷಿಯು ಗುಡೌನ ಇರುವದಿಲ್ಲ ಮನೆ ಮಾತ್ರ ಇರುತ್ತದೆ ಎನ್ನುತ್ತಾರೆ. 1997 ರಲ್ಲಿ ಜಾಗಾದ ಸ್ವಾದೀನತೆ ಪಡೆದ ನಂತರ ಭಾಡಿಗೆಯನ್ನು ಸಹ ತಾವೇ ಪಡೆಯುತ್ತಿದ್ದೀರಿ ಎಂದರೆ ಸರಿ. ಜಾಗಾದ ಮೇಲೆ 1998-99 ರಲ್ಲಿ 5 ಲಕ್ಷ ಸಾಲವನ್ನು ಪಡೆದಿರುತ್ತೀರಿ ಎಂದರೆ ಸರಿ. 2003 ರಲ್ಲಿ ಆರ್ ಎಸ್ ನಂಃ 4624/1 ನ್ನು ಶ್ರೀಕಾಂತ ಕಲಬುರ್ಗಿ ಮತ್ತು ನಿತ್ಯಾನಂದ ಲದ್ವಾ ರವರಿಗೆ ಮಾರಾಟ ಮಾಡಿರುತ್ತೀರಿ ಎಂದರೆ ಸರಿ. ಇವರುಗಳು ಮೊದಲು ಅಲ್ಲಿಯೇ

ಭಾಡಿಗೆದಾರರೆಂದು ವಾಸವಾಗಿದ್ದರೆಂದರೆ ಸರಿ. ಆಸ್ತಿ ನಂಃ 4625 ತಮ್ಮ ತಾಯಿಯ ತಂದೆಯಾದ ರಾಯಪ್ಪನವರ ಆಸ್ತಿ  ಎಂದರೆ ಸಾಕ್ಷಿಯು ನನ್ನ ತಂದೆಯ ಆಸ್ತಿ ಎಂದು ನುಡಿಯುತ್ತಾರೆ. ಅದನ್ನು 1995 ರಲ್ಲಿ ರಾಯಪ್ಪನವರು ಎದುರುದಾರರಿಗೆ ಬಕ್ಷೀಸ್ ಮಾಡಿದ್ದರೆಂದರೆ ಸಾಕ್ಷಿಯು ಈ ಬಗ್ಗೆ ಮಾಹಿತಿ ಇಲ್ಲ ಆದರೇ ಮಾಡಿಲ್ಲ ಎನ್ನುತ್ತಾರೆ. ಬಕ್ಷೀಸ್ ಆದ ವಿಚಾರ ಗೊತ್ತಿದ್ದರೂ ಉದ್ದೇಶಪೂರ್ವಕವಾಗಿ ಈ ಪ್ರಕರಣದಲ್ಲಿ ಕುಟುಂಬದ ಆಸ್ತಿ ಎಂದು ಹೇಳಿ ಸೇರಿಸಿರುತ್ತೀರಿ ಎಂದರೆ ಸರಿಯಲ್ಲ.

4. ಸಿಟಿಎಸ್ ನಂಃ 1525 ರಲ್ಲಿ ಒಟ್ಟು ಐದು ಮನೆಗಳು ಇವೆ ಎಂದರೆ ಸರಿ. ಆ ಐದು ಮನೆಯಲ್ಲಿ ತಾವು ಎರಡು ಮನೆಗಳನ್ನು ಸ್ವಾದೀನ ಪಡೆದುಕೊಂಡಿರುತ್ತೀರಿ ಎಂದರೆ ಸಾಕ್ಷಿಯು ಒಂದು ಮನೆಯನ್ನು ಪಡೆದುಕೊಂಡಿರುತ್ತೇನೆಂದು ನುಡಿಯುತ್ತಾರೆ. ಇಲ್ಲಿಯವರೆಗೂ ಉಳಿದ ಮನೆಗಳನ್ನು ಬಾಡಿಗೆಗೆ ಬಿಟ್ಟಿರುವದಿಲ್ಲ ಎಂದರೆ ಸಾಕ್ಷಿಯು ಬಾಡಿಗೆಗೆ ನೀಡಲಾಗಿದೆ ಎನ್ನುತ್ತಾರೆ. ಸಿಟಿಎಸ್ ನಂಃ 1525 ನ್ನು ಎದುರುದಾರರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಈ ಆಸ್ತಿಯನ್ನು ತಮ್ಮ ತಾಯಿಯವರು ಎದುರುದಾರರಿಗೆ ಬಕ್ಷೀಸ್ ಮಾಡಿದ್ದರೆಂದರೆ ಸರಿಯಲ್ಲ.

5. ಸಂಗಮ್ಮ ಎಂದರೆ ತಮ್ಮ ಅಕ್ಕನವರು ಭಾಗಾಂಶ ಕೋರಿ ಪುನಃ ದಾವೆಯನ್ನು ಮಾಡಿರುವ ವಿಚಾರ ಗೊತ್ತಿರುತ್ತದೆ. ಸದರಿ ದಾವೆಯ ನಂಬರ ಒ ಎಸ್ ನಂಃ 142/2006 ಎಂದರೆ ಸಾಕ್ಷಿಯು ನಂಬರ ಗೊತ್ತಿಲ್ಲ ಆದರೆ ಹಾಕಿರುತ್ತಾರೆಂದು ನುಡಿಯುತ್ತಾರೆ. ಆದಾವೆಯಲ್ಲಿ ಸಂಗಮ್ಮನವರು ಆಸ್ತಿ ನಂಃ 1525 ಮತ್ತು 4625 ಎದುರುದಾರರಾದ ರಮೇಶ ರವರ ಸ್ವಯಾರ್ಜಿತ ಆಸ್ತಿ ಎಂದು ಉಲ್ಲೇಖಿಸಿರುತ್ತಾರೆಂದರೆ ಸಾಕ್ಷಿಯು ಮಾಹಿತಿ ಇಲ್ಲ ಎನ್ನುತ್ತಾರೆ. ಆರ್ ಎಸ್ ನಂಃ 29 ಎದುರುದಾರರಿಗೆ ಮೃತ್ಯು ಪತ್ರದ ಮುಖಾಂತರ ಬಂದಿರುತ್ತದೆಂದರೆ ಸಾಕ್ಷಿಯು ಮಾಹಿತಿ ಇಲ್ಲ ಎನ್ನುತ್ತಾರೆ.  ಆರ್ ಎಸ್ ನಂಬರ ಃ 10/1+2 ಎದುರುದಾರರ ಸ್ವಯಾರ್ಜಿತ ಆಸ್ತಿ ಎಂದರೆ ಸಾಕ್ಷಿಯು ಮಾಹಿತಿ ಇಲ್ಲ ಎನ್ನುತ್ತಾರೆ. ಅಸಲು ದಾವೆ ಸಂಖ್ಯೆ ಃ 13/1996 ರನ್ನು ಹಾಕಿದ ನಂತರ ತಾವುಗಳು ಹಾಗೂ ಸಹೋದರ ಸಹೋದರಿಯರು ಒಟ್ಟಾಗಿ ಒಂದೇ ಮನೆಯಲ್ಲಿ ವಾಸವಾಗಿದ್ದೀರಿ ಎಂದರೆ ಸಾಕ್ಷಿಯು ಮೊದಲು ವಾಸವಾಗಿದ್ದು ನಂತರ ನನ್ನ ಮದುವೆಯಾಗಿದ್ದು ಗಂಡನ ಮನೆಗೆ ಹೋಗಿರುತ್ತೇನೆ ಎನ್ನುತ್ತಾರೆ.  1998 ರಲ್ಲಿ ಅಸಲು ದಾವೆ ಡಿಕ್ರಿಯಾದ ನಂತರವೂ ಸಹ ತಾವುಗಳು ಎಲ್ಲರೂ ಒಟ್ಟಾಗಿ ಒಂದೇ ಮನೆಯಲ್ಲಿದ್ದೀರಿ ಎಂದರೆ ಸಾಕ್ಷಿಯು ನನ್ನ ಮದುವೆ ನಂತರ ಅವರ ಸಂಪರ್ಕ ಇರಲಿಲ್ಲ ಎನ್ನುತ್ತಾರೆ. ನನ್ನ ತಾಯಿಗೆ ಆರು ಜನ ಹೆಣ್ಣು ಮಕ್ಕಳು  ಹಾಗೂ ಒಬ್ಬ ಗಂಡು ಮಗ

ಇರುತ್ತಾರೆ. ಈ ಅರ್ಜಿಯಲ್ಲಿ ಕೇಳಿರುವ ಪರಿಹಾರವನ್ನು ಎಫ್ ಡಿ ಪಿ ಪ್ರಕರಣಗಳಲ್ಲಿಯೂ ಸಹ ಕೇಳಿದ್ದೆ ಎಂದರೆ ಸರಿ. ಎಫ್ ಡಿ ಪಿ ಪ್ರಕರಣಗಳಲ್ಲಿ ಏನೆಲ್ಲಾ ಪರಿಹಾರವನ್ನು ಕೊಡಬೇಕಾಗಿತ್ತೋ ಅದನ್ನೆಲ್ಲಾ ನ್ಯಾಯಾಲಯವು ತಮಗೆ ಕೊಟ್ಟಿರುತ್ತದೆಂದರೆ ಸಾಕ್ಷಿಯು ಮೀನ್ಸ ಪ್ರಾಫಿಟ ಬಂದಿಲ್ಲ ಎನ್ನುತ್ತಾರೆ. ಎಫ್ ಡಿ ಪಿ ನಂಃ 20/2006 ರಲ್ಲಿ ಜಮೀನುಗಳು ನನ್ನ ಪಾಲಿನ ಕಬಜಾವನ್ನು ಪಡೆದಿರುತ್ತೇನೆ. ಯಾವ ಕಾರಣಕ್ಕಾಗಿ ಈ ಪ್ರಸ್ತುತ ಅರ್ಜಿಯನ್ನು ಹಾಕಲು ತಡವಾಗಿರುತ್ತದೆಂದು ಎಲ್ಲಿಯೂ ನಮೂದಿಸಿಲ್ಲ. ಎಫ್ ಡಿ ಪಿ 20/2006 ನ್ನು ನ್ಯಾಯಾಲಯವು 2008 ರಲ್ಲಿ ಮುಕ್ತಾಯಗೊಳಿಸಿದ್ದರೂ ಈ ವರೆಗೂ ಅಂದರೆ 2019 ರವರೆಗೂ ಈ ಅರ್ಜಿಯನ್ನು ಯಾವ ಕಾರಣಕ್ಕಾಗಿ ಹಾಕಲಿಲ್ಲ ಎಂದರೆ ಸಾಕ್ಷಿಯು ಆದೇಶವಾದರೂ ಬಾಡಿಗೆ ಕೊಡುತ್ತೇನೆಂದು ಹೇಳಿದ್ದು ಕೊಡದ ಕಾರಣ ತಡವಾಗಿ ಹಾಕಿರುತ್ತೇನೆ ಎನ್ನುತ್ತಾರೆ. ತಾವು ಈಗಾಗಲೇ 1997 ರಿಂದ ಬಾಡಿಗೆಯನ್ನು ಪಡೆಯುತ್ತಿದ್ದು ಎದುರುದಾರರು ಯಾವದೇ ಮೀನ್ಸ ಪ್ರಾಫಿಟನ್ನು ನೀಡಬೇಕಾಗಿರದಿದ್ದರೂ ಅವರಿಗೆ ತೊಂದರೆ ಕೊಡಲು ಈ ಸುಳ್ಳು ಅರ್ಜಿಯನ್ನು ಹಾಕಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ 1 ನ್ನು ತೋರಿಸಿ ಅದರಲ್ಲಿ ನ್ಯಾಯಾಲಯವು ಮಾಡಿರುವ ಆದೇಶವನ್ನು ಓದಿಸಿ ಕೇಳಲಾಗಿ ಸಾಕ್ಷಿಯು ಅದನ್ನು ನೋಡಿ ಆದೇಶವು ಸರಿ ಇರುತ್ತದೆ ಎನ್ನುತ್ತಾರೆ. ಆ ಆದೇಶದಂತೆ ತಾವು ಎಪ ಡಿ ಪಿ ಯಲ್ಲಿ ಪರಿಹಾರವನ್ನು ಕೋರಿ ಸಲ್ಲಿಸಬೇಕಾಗಿತ್ತು ಎಂದರೆ ಸಾಕ್ಷಿಯು ಈಗಾಗಲೇ ಆದೇಶವಾಗಿರುತ್ತದೆಂದು ನುಡಿಯುತ್ತಾರೆ. ತಾವು ಈಗಾಗಲೇ ಹಾಕಿದ್ದ ಎರಡು ಎಫ್ ಡಿ ಪಿ ಪ್ರಕರಣಗಳು, ಮೂರು ಅಮಲುಜಾರಿ ಪ್ರಕರಣಗಳಲ್ಲಿ ತಮಗೆ ಬರಬೇಕಾದ ಎಲ್ಲಾ ಮೀನ್ಸ ಪ್ರಾಫಿಟ ಬಂದಿರುವ ಕಾರಣ ಪುನಃ ರಾ಼ ಅರ್ಜಿಯನ್ನು ಹಾಕುವ ಸಂದರ್ಬ ಬಂದಿರುವದಿಲ್ಲ ಎಂದರೆ ಸರಿಯಲ್ಲ. ತಾವು ಎದುರುದಾರರಿಂದ ಹೆಚ್ಚಿನ ಹಣ ಪಡೆಯುವ ಉದ್ದೇಶಕ್ಕಾಗಿ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.